**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 61/2023
ಪಿಡಬ್ಲು :7 ಸಿಡಬ್ಲು :14

| | |
|---|---|
| ಸಾಕ್ಷಿಯ ಹೆಸರು | : ಡಾ. ವರದ ನಾಯಕ |
| ಗಂಡನ ಹೆಸರು | : ಶ್ರೀ ಗೋವಿಂದರಾಯ |
| ವಯಸ್ಸು | : 41 ವರ್ಷ |
| ಉದ್ಯೋಗ | : ಹಿರಿಯ ತಜ್ಞರು, ಕೀಲು ಮತ್ತು ಎಲುಬು ತಜ್ಞರು, ತಾಲೂಕಾ ಸಾರ್ವಜನಿಕ ಆಸ್ಪತ್ರೆ, ಖಾನಾಪೂರ |
| ವಾಸ್ತವ್ಯ | : ಖಾನಾಪೂರ |
| ದಿನಾಂಕ | : 30-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು ನಾಲ್ಕುವರೆ ವರ್ಷಗಳಿಂದ ಖಾನಾಪೂರ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಕೀಲು ಮತ್ತು ಎಲುಬು ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 27-11-2022 ರಂದು ಬೆಳಿಗ್ಗೆ 11.32 ರ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಕುಸುಮಳ್ಳಿ ಗ್ರಾಮದ 62 ವರ್ಷ ವಯಸ್ಸಿನ ಮಂಗೇಶ ಅಪ್ಪಣ್ಣ ಕಾಂಬಳೆ ಎನ್ನುವವರು ಅವರು ಮೇಲೆ ಹಲ್ಲೆ ಆಗಿದೆ ಎಂದು ಹೇಳಿ ಚಿಕಿತ್ಸೆಗಾಗಿ ಬಂದಿದ್ದರು.

3. ನಾನು ಗಾಯಳುವನ್ನು ಬೆಳಿಗ್ಗೆ 11.35 ಗಂಟೆಗೆ ಪರೀಕ್ಷೆ ಮಾಡಿದ್ದೇನೆ.

1) ಎಡ ಹಸ್ತದ ಕಿರುಬೆರಳಿನ ಮೇಲೆ ಊತ ಕಂಡು ಬಂದಿತ್ತು. ನಾನು ಆ ಬಗ್ಗೆ ಎಕ್ಸರೆ ತೆಗೆದಿದ್ದೇನೆ. ವರದಿ ಪ್ರಕಾರ left 5$^{th}$ metacarpal ಮೂಳೆ ಮುರೆದಿರುವುದು ಕಂಡು

ಬಂತು.

2) ಬಲ ಭುಜದ ಮೇಲೆ 3 x 2 x 0.5 cm ಅಳತೆಯ ಹಲ್ಲಿನಿಂದ ಕಚ್ಚಿದ ಗುರುತು ಇತ್ತು. ಭುಜದ ಮೇಲೆ ಮನುಷ್ಯನ ಹಲ್ಲಿನಿಂದ ಕಚ್ಚಿದ ಗುರುತು ಇತ್ತು.

4. 1 ನೇ ಗಾಯವು ಮೂಳೆ ಮುರಿತ ಆಗಿದ್ದು ಗಂಭಿರ ಸ್ವರೂಪದ ಗಾಯ ಆಗಿತ್ತು ಮತ್ತು 2 ನೇ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು ಮತ್ತು ಎರಡನೇ ಗಾಯವು 6 ಗಂಟೆಯ ಒಳಗೆ ಆದ ಗಾಯ ಆಗಿತ್ತು ಹಾಗೂ 1 ನೇ ಗಾಯ ಯಾವಾಗ ಆಗಿತ್ತು ಎಂದು ಕೂಡಲೇ ಹೇಳಲು ಆಗುವುದಿಲ್ಲ, ಆದರೆ ತಾಜಾ ಗಾಯ ಆಗಿತ್ತು.

5. ನಾನು ಗಾಯಾಳುವನ್ನು ಪರೀಕ್ಷೆ ಮಾಡಿದ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ–9 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–9[ಎ] ಎಂದು ಗುರುತಿಸಲಾಯಿತು.

6. ನಾನು ಪೋಲಿಸರಿಗೆ ಮಾಹಿತಿಯನ್ನು ನೀಡಿದ್ದೇನೆ. ಎಮ್ ಎಲ್ ಸಿ ಅನ್ನು ನಿಪಿ–10 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–10 [ಎ] ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀ.ಸಿ.ಆರ್.ಎನ್ ವಕೀಲರಿಂದ ಆರೋಪಿತರ ಪರವಾಗಿ</u>**

7. ನಮ್ಮ ಆಸ್ಪತ್ರೆಯಲ್ಲಿ ಎಮ್ ಎಲ್ ಸಿ ರೆಜಿಸ್ಟರನ್ನು ಇರಿಸಲಾಗಿದೆ. ಎಮ್ ಎಲ್ ಸಿ ರೆಜಿಸ್ಟರನಲ್ಲಿ ಚಿಕಿತ್ಸೆಗೆ ಬಂದ ದಿನಾಂಕ, ಗಾಯಳುವಿನ ಹೆಸರು ವಿಳಾಸ ಮತ್ತು ಆದ ಗಾಯದ ಬಗ್ಗೆ ಬರೆಯಲಾಗುತ್ತದೆ ಆದರೆ ನಂಬರನ್ನು ಈ ಹಿಂದೆ ನೀಡುತ್ತಿರಲಿಲ್ಲ ಈಗ ನೀಡುತ್ತಿದ್ದೇವೆ. ನಿಪಿ–9 ರಲ್ಲಿ ಎಮ್ ಎಲ್ ಸಿ ನಂಬರ ಬರೆದಿಲ್ಲ ಎನ್ನುವುದು ಸರಿ. ನಾನು ಎಮ್ ಎಲ್ ಸಿ ಪುಸ್ತಕದಲ್ಲಿ ನಮೂದು ಮಾಡಿಲ್ಲ ಆ ಕಾರಣ ಎಮ್ ಎಲ್ ಸಿ ನಂಬರನ್ನು ಈ ಹಿಂದೆ ನೀಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ಎಮ್ ಎಲ್ ಸಿ ಪ್ರಕರಣಗಳಲ್ಲಿ ನಾವು ಔಟ ವರ್ಡ ನಂಬರನ್ನು ಹಾಕುವುದಿಲ್ಲ. ನೇರವಾಗಿ ಪೋಲಿಸರಿಗೆ ನೀಡುತ್ತೇವೆ. ನಿಪಿ–10 ರಲ್ಲಿ ಪೋಲಿಸರಿಗೆ ಎಮ್ ಎಲ್ ಸಿ ನೀಡಿದ ಬಗ್ಗೆ ಸಮಯವನ್ನು ನಮೂದು ಮಾಡಿಲ್ಲ ಎನ್ನುವುದು ಸರಿ. ನಿಪಿ–10 ರಲ್ಲಿ ನಂಬರ ಬರೆಯಲಾಗಿದೆ ಆದರೆ ಅದು ಒಪಿಡಿ ಅಥವಾ ಐಪಿಡಿ ನಂಬರ ಎಂದು ಗುರುತಿಸಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಅದು ಒಪಿಡಿ ನಂಬರ ಎಂದು ಹೇಳಿದ್ದಾರೆ. ಆ ರೀತಿ ನಾನು ಹೇಳಲು ಯಾವುದೇ ಆಧಾರ ಇಲ್ಲ ಎನ್ನುವುದು ಸರಿಯಲ್ಲ. ನಿಪಿ–9 ರಲ್ಲಿಯೂ ಸಹ ಐಪಿಡಿ ನಂಬರ ಮತ್ತು ಒಪಿಡಿ ನಂಬರ ನಮೂದು ಮಾಡಿಲ್ಲ ಎನ್ನುವುದು ಸರಿ.

9. ಎಕ್ಸರೆ ತೆಗೆದ ಬಗ್ಗೆ ನಿಪಿ–9 ರಲ್ಲಿ ಬರೆದಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನಿಪಿ–9 ರಲ್ಲಿ ನಾನು ಅಂತಿಮ ಅಭಿಪ್ರಾಯವನ್ನು ಮಾತ್ರ ಬರೆದಿದ್ದೇನೆ ಎಂದು ಹೇಳುತ್ತಾರೆ. ಎಕ್ಸರೆಗಳನ್ನು ನಾವು ಆಸ್ಪತ್ರೆಯಲ್ಲಿ ಇರಿಸಿಕೊಳ್ಳುತ್ತೇವೆ ಅದನ್ನು ಪೋಲಿಸರಿಗೆ ನೀಡುವುದಿಲ್ಲ.

10. ಕೇಸ ಶೀಟ್‌ನಲ್ಲಿ ಗಾಯಾಳುಗಳು ಹೇಳಿದ ವಿವರವನ್ನು ಬರೆಯುತ್ತೇವೆ ಎನ್ನುವುದು ಸರಿ. ನಿಪಿ–9 ರಲ್ಲಿ ಎಷ್ಟು ಗಂಟೆಗೆ ಗಾಯಾಳುವಿನ ಮೇಲೆ ಹಲ್ಲೆ ಆಯಿತು ಎಂದು, ಯಾರು ಹಲ್ಲೆ ಮಾಡಿದರು ಎಂಬ ವಿವರಗಳನ್ನು ಬರೆದಿಲ್ಲ ಎನ್ನುವುದು ಸರಿ. ಗಾಯಾಳು ಆಸ್ಪತ್ರೆಗೆ ಬಂದಿದ್ದಾಗ ಗಾಯಾಳು ಧರಿಸಿದ ಬಟ್ಟೆಯ ಮೇಲೆ ರಕ್ತ ಆಗಿದ್ದನ್ನು ನಾನು ಗುಮನಿಸಿರುವುದಿಲ್ಲ.

11. ಎಮ್ ಎಲ್ ಸಿ ಪ್ರಕರಣಗಳಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡುವಾಗ ಗಾಯಾಳು ಧರಿಸಿದ ಬಟ್ಟೆಯ ಮೇಲೆ ರಕ್ತ ಕಲೆಗಳು ಆಗಿದ್ದಲ್ಲಿ ಅಂತಹ ಬಟ್ಟೆಗಳನ್ನು ಸಂಗ್ರಹಿಸಿ ನಾವು ಪೋಲಿಸರಿಗೆ ನೀಡುತ್ತೇವೆ ಎನ್ನುವುದು ಸರಿ. ಈ ಪ್ರಕರಣದಲ್ಲಿ ಗಾಯಾಳುವಿನ

ಬಟ್ಟೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಿಪಿ-9 ರಲ್ಲಿ ಗಾಯದ ಬಣ್ಣವನ್ನು ನಮೂದು ಮಾಡಿಲ್ಲ ಎನ್ನುವುದು ಸರಿ. ಆದರೆ ಅದನ್ನು ಎಮ್ ಎಲ್ ಸಿ ಪುಸ್ತಕದಲ್ಲಿ ಬರೆದಿದ್ದೇನೆ ಎಂದು ಹೇಳುತ್ತಾರೆ. ಗಾಯದ ಉದ್ದ, ಅಗಲ, ಆಳವನ್ನು ನಿಪಿ-9 ರಲ್ಲಿ ಬರೆದಿಲ್ಲ ಎನ್ನುವುದಕ್ಕೆ ಸಾಕ್ಷಿ ನಾನು ಸ್ಪಷ್ಟವಾಗಿ ಬರೆದಿಲ್ಲ ಆದರೆ 3x2x0.5 cm ಎಂದು ಬರೆದಿದ್ದೇನೆ ಎಂದು ಹೇಳಿದ್ದೇನೆ.

12. ಓಡುವಾಗ ಆಯ ತಪ್ಪಿ ಗಟ್ಟಿಯಾದ ನೆಲದ ಮೇಲೆ ಕೆಳಗೆ ಬಿದ್ದಾಗ 1 ನೇ ಗಾಯ ಆಗುವ ಸಾಧ್ಯತೆ ಇದೆ ಎನ್ನುವುದು ಸರಿ.

13. ನಾಯಿ ಕಚ್ಚಿದಾಗ ಗುರುತುಗಳು ಒವೆಲ್ ಶೇಪನಲ್ಲಿ ಬರುವ ಸಾಧ್ಯತೆ ಇದೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು, ನಾನು 2 ನೇ ಗಾಯದಲ್ಲಿ ಬರೆದಿರುವ ಅಳತೆಯ ಗಾಯ ಆಗುವುದಿಲ್ಲ ಎಂದು ಹೇಳಿದ್ದಾರೆ. 2 ನೇ ಗಾಯವು ಮನುಷ್ಯ ಕಚ್ಚಿದಾಗ ಆಗುವ ಸಾಧ್ಯತೆ ಇದೆ ಎಂದು ನಿಪಿ-9 ರಲ್ಲಿ ಬರೆದಿಲ್ಲ ಎನ್ನುವುದು ಸರಿ.

14. ಸಾಮಾನ್ಯವಾಗಿ ಬೇರೆ ತಳಿಗಳ ನಾಯಿಗಳ ಹಲ್ಲುಗಳ ವಿನ್ಯಾಸ ಬೇರೆ ಬೇರೆ ಯಾಗಿರುತ್ತದೆ ಎನ್ನುವುದು ಸರಿ.

15. ಗಾಯಳುವಿನ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಪೋಲಿಸರು ನನಗೆ ಮನವಿಯನ್ನು ನೀಡಿದ್ದರು ಆದರೆ ಅದರ ಉಲ್ಲೇಖವನ್ನು ನಾನು ನಿಪಿ-9 ರಲ್ಲಿ ಬರೆದಿರುವುದಿಲ್ಲ. ನಾನು ಗಾಯಳುವಿಗೆ ಚಿಕಿತ್ಸೆಯನ್ನು ನೀಡದೆ ಪೋಲಿಸರ ಹೇಳಿಕೆ ಮೇರೆಗೆ ನಿಪಿ-9 ರಂತೆ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.